# ಗಣಪತಿ ಶಬ್ದ

**ರಾಗಮಾಲಿಕಾ- ಮಿಶ್ರಛಾಪು ತಾಳ**

**ಡಾ.ಮನೋರಮಾ ಬಿ.ಎನ್**

### ನಾಟ್ಯಗಣಪತಿಯ ಹಾಸುಬೀಸಿನಲ್ಲಿ

ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಹೊರಾವರಣದಲ್ಲಿ ನರ್ತನವಾಡುವ ನಾಟ್ಯಗಣಪತಿಯಂತೂ ಮತ್ತೂ ಆಂಗಿಕ-ಸಾತ್ತ್ವಿಕ ಸಮನ್ವಿತನಾಗಿ ಭಾವವ್ಯಂಜಕ. ಗಣಪತಿಯ ಕುರಿತಂತೆ ಸಾಕಷ್ಟು ತತ್ತ್ವ ಜಿಜ್ಞಾಸೆ, ಗೀತ-ಕಾವ್ಯ-ನೃತ್ಯಪ್ರಸಕ್ತಿಗಳೂ ಹಾಗೆಯೇ ನೃತ್ಯಗಣಪತಿಯ ಕುರಿತೂ ಐತಿಹಾಸಿಕ ವಿವರಗಳು ಇರುವುದರಿಂದ ಅವುಗಳೆಲ್ಲದರ ಬಗೆಗೆ ಮತ್ತೊಮ್ಮೆ ಇಲ್ಲಿ ದಾಖಲಿಸುವ ಗಾತ್ರಭರಿತವಾದ ಕಾರ್ಯವು ಖಂಡಿತಾ ಗಣಪತಿಯ ಹೊಟ್ಟೆಯಂತೆಯೇ ಹಿರಿದು. ಇಲ್ಲಿ ಉಲ್ಲೇಖಿಸಲೇಬೇಕಾದದ್ದೆಂದರೆ, ಶಿಲ್ಪ ಮತ್ತು ನರ್ತನವು ಪರಸ್ಪರ ಕೊಡುಕೊಳ್ಳುವಿಕೆಯ ನೆಲೆಯಲ್ಲಿ ಪಡೆಯುವ ಉಪಕಾರಗಳನ್ನು.

ನೃತ್ಯಾವಹವಾಗಿ ಗಣಪತಿಯನ್ನು ಕಾಣುವುದರಲ್ಲಿಯೂ ಹೊಸತನವು ಅಪೇಕ್ಷಿತ ವಿಚಾರ. ಬಹಳಷ್ಟು ಸಲ ಪ್ರಥಮಪೂಜಿತ, ವಿಘ್ನನಿವಾರಕನೆಂದಷ್ಟೇ ಸ್ತುತಿಗೆ ಮೀಸಲಾಗಿಯೋ ಇಲ್ಲವೇ ಕೆಲವೊಂದು ಜನಪ್ರಿಯ ಕತೆಗಳನ್ನು ಸಂಚಾರಿ ಅಭಿನಯಗಳಷ್ಟಕ್ಕೇ ಅಳವಡಿಸಿಕೊಳ್ಳುವುದಕ್ಕಷ್ಟೇ ಗಣಪತಿ ಸೀಮಿತವಾಗುತ್ತಾನೆ. ಹಸ್ತಗಳಲ್ಲಾದರೋ ಕಪಿತ್ಥ ಸಂಯುತ ಹಸ್ತ (ಕುಕ್ಷಿ ವಿನ್ಯಾಸ), ಅರಾಳ ಹಸ್ತ (ಕರ್ಣಗಾತ್ರ), ಕರಿಹಸ್ತ (ಮುಕುಲ, ಅರಾಳದಿಂದ ಸೊಂಡಿಲ ಮೊಗನೆಂಬ ಸಂಕೇತ), ತಾಮ್ರಚೂಡ (ಪಾಶಾಂಕುಶಧಾರಿ), ಉನ್ಮುಖವಾದ ಊರ್ಣನಾಭ ಮತ್ತು ಅಭಯ ಪತಾಕ ಹಸ್ತ (ಮೋದಕಪ್ರಿಯ) ಮುಂತಾದವುಗಳನ್ನು ಬಳಸಿ ಅಭಂಗದಲ್ಲಿ ಪಾದವಿನ್ಯಾಸವನ್ನು ನಡೆಸುವುದಕ್ಕಷ್ಟೇ ಗಣಪತಿಯ ಆಂಗಿಕ ಮಿತಿಗೊಳ್ಳುತ್ತಿರುವುದು ಸರ್ವವೇದ್ಯ. ಹಸ್ತ-ಮುದ್ರೆಗಳಿಂದಾಚೆಗೆ ಕಲೆಯಲ್ಲಿ ಸಾಧಿಸಬಹುದಾದ ಅಂಶಗಳು ಅನೇಕವಿದೆಯೆಂಬುದು ಬಲ್ಲವಷ್ಟೇ. ಹಾಸಸ್ಥಾಯಿಗೂ, ಹಾಸ್ಯರಸಕ್ಕೂ ಆತನೇ ಅಧಿಪತಿ ಎಂಬಲ್ಲಿ ನರ್ತನಸಮಯದಲ್ಲಿ ಆತನನ್ನು ಬಳಸಿಕೊಳ್ಳಬಹುದಾದ ಸೂಕ್ಷ್ಮ ಇನ್ನಷ್ಟು ಸ್ಪಷ್ಟವಾಗುತ್ತದೆ. ಕೇವಲ ಸಂಕೇತರೂಪವಷ್ಟೇ ಅಲ್ಲದೆ ನಾಟ್ಯಶಾಸ್ತ್ರೋಚಿತವಾದ ಅಂಗೋಪಾಂಗ ಪ್ರತ್ಯಂಗಸಮನ್ವಯದಲ್ಲಿ ನರ್ತನರಂಗದಲ್ಲಿ ಗಣಪತಿಯನ್ನು ಕಟೆದರೆ ಈಗಾಗಲೇ ಶಿಲ್ಪಶಾಸ್ತ್ರದಲ್ಲಿ ಕಾಣುತ್ತಿರುವ ನಾಟ್ಯಗಣಪತಿಯ ಆಂಗಿಕ-ಸಾತ್ತ್ವಿಕ ಲೀಲಾವಿಶೇಷ ಸಾಕ್ಷಾತ್ಕಾರಗೊಳ್ಳುತ್ತದೆ.

## ಶಬ್ದನೃತ್ಯದ ಮಹತ್ತ್ವದ ಕುರಿತು

ಭರತನಾಟ್ಯದಲ್ಲಿ ಜತಿಸ್ವರವಾದ ನಂತರ ಕ್ಲಿಷ್ಟವಾದ ವರ್ಣವನ್ನು ನರ್ತಿಸುವ ಮೊದಲು, ಕಲಾವಿದೆಯು ತನ್ನ ಅಭಿನಯ ಚಾತುರ್ಯ ಪ್ರಸ್ತುತಪಡಿಸಲು ಅನುವು ಮಾಡಿಕೊಡುವ ಮೂರನೇಯ ಅಂಗ'ಶಬ್ದನೃತ್ಯ'. ಇದು ಪುಟ್ಟ ಜತಿಗಳು ಮತ್ತು ಸಾಹಿತ್ಯದ ಸಮ್ಮಿಶ್ರಣದಿಂದ ಕೂಡಿದ್ದು, ಸಾಹಿತ್ಯವೂ ಪ್ರಾಸ-ಅನುಪ್ರಾಸದಿಂದ ಕೂಡಿದ್ದು ಆಕರ್ಷಕವಾಗಿರುತ್ತದೆ. ಚಿಕ್ಕ ಚಿಕ್ಕ ಸೊಲ್ಕಟ್ಟುಗಳು ನಾಲ್ಕು ಚರಣಗಳು, ಪ್ರತೀ ಚರಣದ ಅಂತ್ಯಭಾಗಕ್ಕೆ ಸಂಚಾರೀಗಳು, ಒಂದೊಂದು ನುಡಿಯಲ್ಲಿ ಬರುವ ಕೊನೆಯ ಸಾಲನ್ನು ಮೂರು ಮೂರು ಬಾರಿ ಹಾಡಿ ನರ್ತಿಸುವುದು ಇದರ ಕ್ರಮ.

ಶರಣಾಗತಿಯ ಅಂಶವೇ ಶಬ್ದನೃತ್ಯಸಾಹಿತ್ಯದ ಪ್ರಮುಖ ಅಂಶ. ಇದರಲ್ಲಿ ಅಭಿನಯಿಸುವ ಸಾಹಿತ್ಯದ ಹಾಡುವಿಕೆಯು ಸಂಗೀತದ ನೆರವಲ್ ಪದ್ಧತಿಯನ್ನು ಅನುಸರಿಸುತ್ತದೆ. ಸಾಹಿತ್ಯದ ರಚನೆ ಬಹುಮಟ್ಟಿಗೆ ಪದಗಳೆಂಬ ಪ್ರಕಾರವನ್ನೇ ಹೋಲುವುದರಿಂದ ಭಾವಪುಷ್ಟಿಗಾಗಿ ವಿಳಂಬಕಾಲ ಪ್ರಶಸ್ತವೆನ್ನಲಾಗಿದೆ. ಸೊಲ್ಕಟ್ಟುಗಳನ್ನೂ ರಾಗದಲ್ಲೇ ಹಾಡುವುದು ಕ್ರಮ. ಇತ್ತೀಚೆಗೆ ಒಂದೊಂದು ಸಾಲುಗಳನ್ನು ಒಂದೊಂದು ರಾಗದಲ್ಲಿ ಹಾಡುವ ರಾಗಮಾಲಿಕೆ ಪದ್ಧತಿ ಜನರಂಜನೆಯ ದೃಷ್ಟಿಯಿಂದ ಅಗತ್ಯವೆನಿಸಿದೆ. ತಾಳವನ್ನು ಅಭಿನಯಕ್ಕೆ ಅನುಕೂಲವಾಗಿ ಹೊಂದಿಸಲು ಮಿಶ್ರಛಾಪು ತಾಳ ಬಳಸುತ್ತಾರೆ.

ಶಬ್ದ ಎಂಬ ಪದದ ವಿವಿಧ ಸಂದರ್ಭಗಳ ಅರ್ಥವು ಧ್ವನಿ, ಅಕ್ಷರ, ಕೀರ್ತಿ, ಗಾನ, ವಾಕ್ಯ, ಆಕಾಶ, ಶಾಸ್ತ್ರದಲ್ಲಿ ಹೇಳುವಂತ ಎಂಬ ಏಳು ಪ್ರಕಾರಗಳಲ್ಲಿವೆ. ಇಲ್ಲಿ ನೃತ್ಯದಲ್ಲಿ ಪ್ರಯೋಗಿಸಲ್ಪಡುವ ಶಬ್ದಕ್ಕೆ ಇದ್ದ ಮೊದಲಿನ ಹೆಸರು ಯಶೋಗೀತ ಮತ್ತು

ವರ್ಣನಗೀತ ಎಂಬ ನೆಲೆಯಲ್ಲಿ ೬ ಅರ್ಥಗಳೂ ಹೊಂದುತ್ತವೆ. ಭಾಗವತ ಮೇಳ ನಾಟಕಗಳಲ್ಲಿ, ಕೂಚಿಪುಡಿಯಲ್ಲಿ ಶಬ್ದನೃತ್ಯದ ಬಳಕೆ ಹೆಚ್ಚು.

ಇದು ಮೊದಲಿಗೆ ದೇವಾಲಯದ ದೇವತೆ, ಊರಿನ ಹಿರಿಯ ವೀರ, ರಾಜ ಮೆರವಣಿಗೆಯಲ್ಲಿ ಬರುತ್ತಿರುವಾಗ ಅಥವಾ ಸಭೆಯಲ್ಲಿರುವಾಗ ವಂಧಿಮಾಗಧರು ಅವರ ಗುಣವಿಶೇಷಗಳನ್ನು ಶ್ಲಾಘಿಸುವ ಸ್ತುತಿಯಾಗಿತ್ತು. ಕ್ರಮೇಣ ಇಂಥ ಸ್ತುತಿಗಳು ಪ್ರೇಮ ಪ್ರಸಂಗಗಳನ್ನು ಕಲ್ಪಿಸಿಕೊಂಡು ವಿವರಿಸುವ ಮಟ್ಟಕ್ಕೆ ಬಂತು. ನಾಯಕನಿಗಾಗಲೀ, ರಾಜನಿಗಾಗಲೀ, ದೇವರಿಗಾಗಲೀ ಎಲ್ಲರೂ ಶರಣಾಗುವಂತೆ ಪ್ರಣಾಮ ಶಬ್ದಗಳು ಸೇರಿಕೊಂಡವು. ಕಡೆಯ ಸಾಲಿನ ಸಾಹಿತ್ಯದಲ್ಲಿ ಮುಸಲ್ಮಾನ, ಮರಾಠಾ ದೊರೆಗಳನ್ನು ಮೆಚ್ಚಿಸಲು ಸಲಾಮುರೇ ಎಂಬವೆಲ್ಲಾ ಬಳಕೆಗೆ ಬಂತು.

ನಾಟ್ಯಶಾಸ್ತ್ರ ಸಂಪ್ರದಾಯದ ಮಾರ್ಗದಲ್ಲಿ ಶಬ್ದನೃತ್ಯದ ಉಲ್ಲೇಖವಿಲ್ಲ. ಆದರೆ ಮಾರ್ಗೋತ್ತರದ ಕಾಲಗಳಲ್ಲಿ ಶಬ್ದನೃತ್ಯಕ್ಕೆ ದೇಸೀ ಗೇಯಪ್ರಬಂಧದ ಪ್ರೇರಣೆಯಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ನರ್ತನನಿರ್ಣಯ, ಸಂಗೀತದರ್ಪಣ, ಸಂಗೀತ ಮುಕ್ತಾವಳಿ ಪಂಪಾಸ್ಥಾನ ವರ್ಣನಂ.. ಹೀಗೆ ಹಲವು ಲಕ್ಷಣಗ್ರಂಥ ಮತ್ತು ಕಾವ್ಯಗಳು ಶಬ್ದನೃತ್ಯದ ಬೇರೆ ಬೇರೆ ಆಯಾಮಗಳನ್ನು ತಿಳಿಸುತ್ತವೆ. ಹೇಳಲು ಹೊರಟರೆ ಸಾಕಷ್ಟಿದೆ.

ಆದರೆ ಭರತನಾಟ್ಯದ ಕಛೇರಿಕ್ರಮದಲ್ಲೊಂದಾದ ಶಬ್ದನೃತ್ಯವು ೧೯೬೦ರಲ್ಲಿ ಮರೆಯಾಗುತ್ತಾ ಬಂದು ಅರಂಗೇಟ್ರಂಗೆ ಮಾತ್ರ ಸೀಮಿತವಾಗಿದೆ. ಶಬ್ದಂಗೆ ಜತಿಸ್ವರದಂತೆ ನೃತ್ತವಾಗಲೀ, ವರ್ಣದಂತೆ ಅಭಿನಯವಾಗಲೀ ಪೂರ್ಣಪ್ರಮಾಣದಲಿಲ್ಲ ಎಂಬ ಕಾರಣವನ್ನೊಡ್ಡಿ ೧೯೪೦ರ ತರುವಾಯ ಕಲಾವಿದರು ಶಬ್ದಂ ನರ್ತಿಸುವುದನ್ನು ದೂರವಿಡುತ್ತಲೇ ಬಂದದ್ದೂ; ಇತ್ತೀಚೆಗಂತೂ ಶಬ್ದನೃತ್ಯವು ಅಭಿನಯಕ್ಕೆ ಪ್ರವೇಶವನ್ನಿತ್ತರೂ ವಾಕ್ಯಾರ್ಥಾಭಿನಯವಾಗದೇ ಪದಾರ್ಥಾಭಿನಯವೇ ಅಗುತ್ತಿರುವ ಸಂದರ್ಭಗಳೇ ಹೆಚ್ಚಾಗಿದೆ.

ಮೈಸೂರುರಾಜರ ಆಸ್ಥಾನಗಳಲ್ಲಿ ವಿಶೇಷವಾಗಿ ಗಣೇಶ ಶಬ್ದವನ್ನು ನರ್ತಿಸುತ್ತಿದ್ದ ಪರಿಪಾಠವಿರುತ್ತಿತ್ತು. ಅದನ್ನು ಹೊರತುಪಡಿಸಿದರೆ ಭರತನಾಟ್ಯದಲ್ಲಿ ಗಣೇಶನನ್ನು ಸ್ತುತಿಸುವ ಶಬ್ದನೃತ್ಯಚಾಲ್ತಿಯಲ್ಲಿಲ್ಲ. ಈ ಹಿನ್ನೆಲೆಯಲ್ಲಿ ಗಣಪತಿಪ್ರೀತ್ಯರ್ಥವಾಗಿ ನೃತ್ಯಲಕ್ಷಣಸಮೇತವಾಗಿ ಕಾವ್ಯಧರ್ಮವನ್ನೂ ಆದಷ್ಟೂ ಲಕ್ಷಿಸಿ ಗಣೇಶಶಬ್ದವೊಂದನ್ನು ರಚಿಸಲಾಗಿದೆ. ಸೊಲ್ಕಟ್ಟುಗಳಿಗೂ ಕರ್ನಾಟಕದ ನೃತ್ಯಶಾಸ್ತ್ರಗ್ರಂಥಗಳನ್ನನುಸರಿಸಲಾಗಿದೆ.

ಈವರೆಗೆ ಕಲಾಭಿಯದಲ್ಲಿ ಕಂಡುಬರದ ಗಣೇಶಪುರಾಣದ ನೂಪುರಾಸುರ ಸಂಹಾರ ಕತೆಯನ್ನೂ ನೃತ್ಯೋಪಯೋಗಿಯೆಂದು ಮನಗಂಡು ವಿನೂತನವಾಗಿ ಬಳಸಲು ಅನುಕೂಲವಾಗಿ ಚರಣವನ್ನು ರಚಿಸಲಾಗಿದೆ. ಸಹೃದಯಿ ಕಲಾವಿದರು ಈ ಸಾಹಿತ್ಯವನ್ನು ಸದುಪಯೋಗಪಡಿಸಿಕೊಂಡರೆ ಆ ವಿಘ್ನನಾಶಕನು ಶಬ್ದನೃತ್ಯದಲ್ಲಿ ಮತ್ತೊಮ್ಮೆ ಪ್ರಕಟಗೊಳ್ಳುತ್ತಾನೆ. ಜೊತೆಗೆ ಶಬ್ದನೃತ್ಯವು ಮತ್ತೊಮ್ಮೆ ಕಲಾಕಾರ್ಯಕ್ರಮದ ಅಂಗಭಾಗವಾಗುತ್ತದೆ.

(ಶಬ್ದನೃತ್ಯದ ಸಹಿತ ಇನ್ನಷ್ಟು ಹೆಚ್ಚಿನ ನೃತ್ಯಬಂಧ ಇತಿಹಾಸದ ವಿವರಗಳಿಗೆ **ನೃತ್ಯಮಾರ್ಗಮುಕುರ**ಎಂಬ ಲೇಖಿಕೆಯ ಕೃತಿಯನ್ನು ಪರಿಶೀಲಿಸಬಹುದು. ಇಲ್ಲಿ ಸ್ಥೂಲರೂಪವಷ್ಟೇ ಇದೆ.)

**ಶಬ್ದನೃತ್ಯದಲ್ಲಿ ಬಳಸಲಾಗುವ ಮಲಹರಿ, ಷಣ್ಮುಖಪ್ರಿಯ ಮೊದಲಾದ ಸಾಂಪ್ರದಾಯಿಕ ರಾಗಗಳಷ್ಟೇ ಅಲ್ಲದೆ ಗಣಪತಿಗೆ ಸಂಬಂಧಿಸಿದ ಇಷ್ಟರಾಗಗಳಾದ ಹಂಸಧ್ವನಿ, ಗಂಭೀರ ನಾಟ, ಚಕ್ರವಾಕ ಮೊದಲಾದವುಗಳನ್ನು ರಾಗಸಮನ್ವಯಿಸಿ ಉಪಯೋಗಿಸಿಕೊಂಡರೆ ರಮಣೀಯವಾಗುತ್ತದೆ.**

ತಾ ತೈಯಾ ತೈಯುಂ ತತ್ತ ತಾಂ
ತಳಾಂಕು ಜೊಂ ಕಿಟಕತತರಿಕಿಟತೊಂ
ತತ್ತಣ ತಂಧಣ ತಜ್ಜೊಣು ಝೊಣುಧಿಮಿ
ತತ್ತೊಂ ಧಣಕಿಣ ತದ್ಧಿಮಿ ಧಿಮಿಕಿಟ
ತಾ ತೈಯ್ಯ ತೈಯ್ಯುಂ ದತ್ತ ತಾಂ

ಪ್ರಥಮಪೂಜಿತ ಪ್ರಮಥಗಣಪತಿ
ಸಿದ್ಧಿ ಬುದ್ಧಿಯರೊಡನೆ ಕಲೆವರು

ಕಲಿತು ಬೆಳೆವರು, ನಿನ್ನ ದಯೆಯಲಿ
ನಿಜದ ಮಾರ್ಗದಿ ಮುನ್ನಡೆವ ತೆರ ಹರಸು ನೀ ವರ ಕರುಣಿಸಿ
ವರ ಕರುಣಿಸಿ |೩|

ತಾಕಣಕ ಣಕ ಝೇಕುಣಂತರಿ
ಝೇಕು ಝೊಣುತರಿ ಝಣಕು ಗಿಣತರಿ
ಏಕದಂತನೆ ಶೂರ್ಪಕರ್ಣ
ಅನೇಕಜನರನು ಪೊರೆಯೊ ಸುಮುಖ
ಕವೀಶ ಕ್ಷಿಪ್ರಕೃಪಾಳು ಗಜಮುಖ
ವಿಕಟ ಹೇ ಗಣನಾಯಕ
ಗಣನಾಯಕ | ೩|

ತಾಕು ಝೇಕುತ ಝೇಕು ಕುಕುಂದರಿ
ಕುಕುತ ತಗುಂತರಿ ತಗುತ ಕುಕುಂದರಿ
ಮೋದಕ ಪ್ರಿಯ ಕಪಿಲ ಗಣಪತಿ
ಇಕ್ಷುದಂಡವನೂರಿ ನಡೆಯುತ
ಡೊಳ್ಳು ಹೊಟ್ಟೆಯ ಭಾರಕೇದುತ
ತೇರಿಲಿಯ ಮೇಲೇರಿ ಸೊಗಸಲಿ ನಡೆಯುತಿಹ ಹೇರಂಬನೇ
ಹೇರಂಬನೇ |೩|

ಧೀಕುಣಕ ಣಕ ಧೀಕುಣಂತರಿ
ಧೀಂತಣಂತರಿ ತಣುತಧೀಂತರಿ
ಡಮರು ಮದ್ದಳೆ ತಾಳ ಕೊಳಲಿನ
ನಾದದಿಂಪಿಗೆ ನೋಂತು ನಲಿಯುತ
ಬಾಲಗಣಪನ ನೂಪುರದ ಪದ **...( ನೆರವಲ್/ಸ್ವರಪ್ರಸ್ತಾರ ಹೆಣೆಯಬಹುದು)**
ಘಲಿರು ಘಲಿರೆನೆ ಒಲಿದೊಲಿದು ನರ್ತಿಸುತಲಿಹ ಫಲದಾಯಕ
ಫಲದಾಯಕ |೩|

ನಂತಧೀಂತಕ ನಕಧಿಕ್ ಕಿಟತಕ
ಧಿಕ್‌ತನಾಂತಕ ತೋಂ ನಂ ತಕನಕ
ಪಾಶದಿಂ ಭವಪಾಶ ಕಿತ್ತೆಸೆ
ಅಂಕುಶದಿ ನಿಗ್ರಹಿಸು ಕರಣವ
ಕುಂಡಲಿನಿ ಸರ್ಪವನು ಚೋದಿಸು
ತೂಗಿ ಸೊಂಡಿಲ ನೀಡು ಭಕ್ತಾಭೀಷ್ಟವನು ಗೌರೀಸುತ
ಗೌರೀಸುತ |೩|

ತದ್ಧಿನ್ನಂ ತಕುಂದರಿಕಿಟತಕ
ತಕಧಿನ್ನಂ ತಕುಂಧರಿಕಿಟತಕ

ಧಿಂಧಿನ್ನಂ ನ್ನಂತರಿಕಿಟತಕ
ತಳಾಂಗುತೋಂ ಕಿಟತರಿಕಿಟತೋಂ
ತಾತ್ಯೆಯಾ ತ್ಯೆಯ್ಯುಂ ಧತ್ತ ತಾಂ...